ಓ ಎಸ್ ಃ 7/2011 ಪಿ ಡಬ್ಲ್ಯೂ ಃ 1 - ಮಂಜುಳಾ

ದಿನಾಂಕಃ 11.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು 8 ನೇ ಪ್ರತಿವಾದಿ ಪರ ಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ

7. ದಾವಾ ಆಸ್ತಿಯಾದ ಐಟಂ ನಂ.1 ರಲ್ಲಿರುವ ಸರ್ವೆ ನಂ.164/2 ಬಿ ಆಸ್ತಿಯು ನನ್ನ ತಾಯಿಗೆ ಭೂ ನ್ಯಾಯಮಂಡಳಿಯಿಂದ ಮಂಜೂರಾಗಿದ್ದು, ಅದು ಆಕೆಯ ಸ್ವಯಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ.ದಿಃ 26.08.2006 ರಂದು ನನ್ನ ತಾಯಿ, ನನ್ನ ಅಣ್ಣ, ಮತ್ತು ನನ್ನ ತಂಗಿಯವರು ಸೇರಿಕೊಂಡು 7 ನೇ ಪ್ರತಿವಾದಿಗೆ ದಾವಾ ಐಟಂ ನಂ,1 ಆಸ್ತಿಗಳನ್ನು ರೂ.42,25,000/- ಕ್ರಯದ ಒಪ್ಪಂದ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಿಃ 05.01.2007 ರಂದು ಸದರಿಯವರು 7 ನೇ ಪ್ರತಿವಾದಿಗೆ ಮಾರಾಟ ಮಾಡುವ ಹಕ್ಕನ್ನು ಜಿಪಿಎ ಮುಖಾಂತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯು ದಾವಾ ಐಟಂ ನಂ.1 ರ ಆಸ್ತಿಗಳನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಆಗಲೇ ನನ್ನ ತಾಯಿ ಕೇಸ್ ಮಾಡಿರುತ್ತಾರೆ ಎಂದು ಹೇಳುತ್ತಾರೆ. 8 ನೇ ಪ್ರತಿವಾದಿಯು ದಾವಾ ಐಟಂ ನಂ.1 ರ ಆಸ್ತಿಗಳನ್ನು 9 ನೇ ಪ್ರತಿವಾದಿಗೆ ರೂ.56 ಲಕ್ಷಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದಕ್ಕೆ ನಾವು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ದಿಃ 29.12.2010 ರಲ್ಲಿ ಮೈಸೂರಿನ ಸುನೀಲ್ ಕುಮಾರ್ ನೋಟರಿಯವರ ಸಮಕ್ಷಮ ನಾನು ಹಾಜರಾಗಿ 7 ನೇ ಪ್ರತಿವಾದಿಗೆ ಸರಸ್ವತಿಯವರಿಗೆ ನಮ್ಮ ಕುಟುಂಬದವರು ಆಸ್ತಿ ಮಾರಾಟ ಮಾಡಿರುವ ಬಗ್ಗೆ ನನಗೆ ಒಪ್ಪಿಗೆ ಇರುವುದು ಎಂದು ಹೇಳಿ ಬರೆಸಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

8. 8 ನೇ ಪ್ರತಿವಾದಿಯು ದಾವಾ ಅಸ್ತಿಗಳಾದ ಐಟಂ ನಂ.1 ಅನ್ನು ಖರೀದಿಸುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆಯನ್ನು ಮಾಡಿಸಿ ತಕರಾರನ್ನು ಕರೆ ಮಾಡಿದ್ದು, ಯಾರು ತಕರಾರು ಸಲ್ಲಿಸದೇ ಇರುವ ಕಾರಣಕ್ಕೆ ಸದರಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ಆಸ್ತಿ ಮಾರಾಟವಾಗಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ನನ್ನ ತಾಯಿಗೆ ಗೊತ್ತಿತ್ತು ಎಂದು ಹೇಳುತ್ತಾರೆ. ಈ ಕೇಸನ್ನು ನನ್ನ ತಾಯಿ ನನ್ನ ಮೂಲಕ ಹಾಕಿಸಿರುತ್ತಾರೆ ಎಂದರೆ ಸರಿ.

9. ಈ ಕೇಸಿನಲ್ಲಿ ಯಾವೆಲ್ಲಾ ದಾಖಲಾತಿ ಮತ್ತು ತಕರಾರು ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಮಾಹಿತಿಯನ್ನು ನಾನೇ ನೀಡಿದ್ದು, ಅದನ್ನು ತಿಳಿಸಬೇಕಾದರೆ ನನ್ನ ತಾಯಿ ಕೂಡ ನನ್ನ ಜೊತೆ ಇದ್ದರು. ದಾವಾ ಐಟಂ ನಂ. 1 ಅನ್ನು ಮಾರಾಟ ಮಾಡಿ ಬಂದಹಣದಿಂದ ನನ್ನ ಅಣ್ಣನಾದ ಕುಮಾರ್ ಮೈಸೂರಿನಲ್ಲಿ ಒಂದು ಮನೆಯನ್ನು ಖರೀದಿಸಿ ಅದರಲ್ಲೇ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನಾದ ಕುಮಾರ್ ಮೈಸೂರಿನಲ್ಲಿ ಒಂದು ಮನೆಯನ್ನು ಖರೀದಿಸಿ ಅದರಲ್ಲೇ ವಾಸವಾಗಿರುವುದು ನನಗೆ ತಿಳಿದಿದ್ದರೂ ಸಹ ಕೇಸಿಗೆ ಅನುಕೂಲವಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೈಸೂರಿನ ಆಸ್ತಿಯನ್ನು ಈ ಕೇಸಿಗೆ ಸೇರಿಸಬೇಕು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದಂತೆ ಆದ ಎಲ್ಲಾ ಕ್ರಯ ಪತ್ರಗಳ ಬಗ್ಗೆ ನನಗೆ ಮಾಹಿತಿ ಇದ್ದು, 8 ನೇ ಪ್ರತಿವಾದಿಯಿಂದ ಹಣ ಪಡೆಯಬೇಕೆಂಬ ದುರುದ್ದೇಶದಿಂದ ಈ ಕೇಸನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಐಟಂ ನಂ.2 ರ ಸರ್ವೆ ನಂ. 167/2 ಅನ್ನು ಯಾರಿಗೆ ಕ್ರಯ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ಅನ್ನು ಖರೀದಿಸಿದ ಕ್ರಯದಾರರನ್ನು ಯಾಕೆ ಈ ಕೇಸಿನಿಂದ ಕೈಬಿಡಲಾಗಿದೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ